ಮಹಾನುಭಾವ ಸಿಂಗ್ ನನಗೂ ಎಕ್ಸರೇ ತೆಗೆದಿದ್ದರು! ಹೀಗೇ ಏನೇನೋ ಯೋಚನೆಗಳಲ್ಲಿ ನಾನು ಮುಳುಗುತ್ತಿರುವಾಗ ಡಾಕ್ಟರರ ಒಳಕೋಣೆಯ ಬಾಗಿಲು ತೆರೆದ ಶಬ್ದವಾಗಿ ತಲೆ ಎತ್ತಿನೋಡಿದೆ. ಗಣೇಶಯ್ಯ ಬರುತ್ತಿದ್ದ. ಅವನ ಮುಖದಲ್ಲಿ ಗೆಲವು ತಾಂಡವವಾಡುತ್ತಿದೆ. ನನ್ನತ್ತ ನೋಡುತ್ತಲೇ ಪ್ರಸನ್ನವದನನಾಗುತ್ತ ಬಂದ. ನನ್ನ ಹತ್ತಿರ ಬಂದವನೇ 'ಏನೂ ಯೋಚ್ನೆ ಇಲ್ಲ ಸಾರ್... ತುಂಬಾ ಮೈನರ್ ಕೇಸಂತೆ. ಒಂದು ಟಾನಿಕ್ ಬರೆದುಕೊಟ್ಟಿದಾರೆ... ಹದಿನೈದುದಿನ ತಗೊಂಡ್ರೆ ಮುಗಿದೇ ಹೋತು. ಒಂದೆರಡು ತಿಂಗಳು ಮಾತ್ರ ಖಾರ ಕಡಿಮೆ ತಿನ್ನಬೇಕಂತೆ. ಅಷ್ಟೆ ಸಾರ್... ಅಂದ ಹಾಗೇ ಈಗ ನಿಮ್ಮನ್ನು ಕಳಿಸಿ ಅಂತ ಅಂದರು ಸಾರ್ ಡಾಕ್ಟ್ರು' ಎಂದೆಲ್ಲ ಒಂದೇ ಉಸಿರಿಗೆ ವದರಿ ಸುಮ್ಮನಾದ. ಸದ್ಯ ಈ ನರಪೇತಲನಿಗೆ ಇನ್ನಾವ ಪೀಡೆಯೂ ಇಲ್ಲವಲ್ಲ– ಎನ್ನಿಸಿ ಮನಸ್ಸಿಗೆ ನಿರಾಳವಾಯಿತು. 'ಹೋಗಲಿಬಿಡಿ ಗಣೇಶಯ್ಯ... ಸದ್ಯ ಏನೂ ಯೋಚಿಸಬೇಕಾದ್ದಿಲ್ಲ ಅಂತಾಯ್ತಲ್ಲ. ನಾನು ತುಂಬಾ ಹೆದರಿದ್ದೆ. ಹೋಗ್ಲಿಬಿಡಿ... ಕಂಗ್ರಾಟ್ಸ್' ಎನ್ನುತ್ತ ನಾನೂ ಮೇಲೆದ್ದು ಸಿಂಗ್ ಅವರ ಒಳ ಕೋಣೆಯ ಬಳಿ ಹೊರಟೆ. ನರಪೇತಲ ಗಣೇಶಯ್ಯನಿಗೇ ಏನೂ ರೋಗವಿಲ್ಲವೆಂದಾದ ಮೇಲೆ ನನಗಿನ್ನಾವ ರೋಗವಿದ್ದೀತು– ಎನ್ನಿಸಿ ನಗು ಬಂತು. ಡಾಕ್ಟರ್ ಅವರು ನನ್ನನ್ನು ಒಳಗೆ ಕರೆದು ಬಾಗಿಲು ಹಾಕಿಕೊಂಡರು. ಏನೇ ಆದರೂ ಡಾಕ್ಟರ ಕೋಣೆಯೊಳಗೆ ಹೆಜ್ಜೆ ಇಟ್ಟಾಗ ನೂರಕ್ಕೆ ನೂರು ಆರೋಗ್ಯಶಾಲಿಗೂ ಏನೋ ಒಂದು ವಿಧವಾದ ಗಾಬರಿ–ದಿಗಿಲು ಆಗುವುದು ತೀರ ಸಹಜ... ಅಲ್ಲಿನ ಬಗೆ ಬಗೆಯ ಶೀಶೆಗಳು. ಬಣ್ಣ ಬಣ್ಣದ ದ್ರಾವಣಗಳು. ತಾವಾಗಲೂ ಮೂಗಿಗೆ ರಾಚುವ ಆ ದರಿದ್ರ ಡೆಟಾಲ್ ವಾಸನೆ. ಡಾಕ್ಟರರ ವಿಚಿತ್ರ ಉಡುಪು, ಹಲವು ರೀತಿಯ ರೋಗಿಗಳ ದರ್ಶನ ಇವೆಲ್ಲ ಒಟ್ಟಾಗಿ ಸೇರಿ ಮನಸ್ಸಿಗೆ ಇಲ್ಲದ ಮುಜುಗರವಾಗುತ್ತದೆ. ನನಗಂತೂ ಆಸ್ಪತ್ರೆಗಳೆಂದರೇ ಅಲರ್ಜಿ... ನಾನೇ ಈಗ ರೋಗಿಯಾಗಿ ಡಾ|| ಸಿಂಗ್ ಅವರ ಮುಂದೆ ನಿಂತಿದ್ದೆ. ಅವರು ನನ್ನ ಬಗ್ಗೆ ಏನು ಹೇಳುತ್ತಾರೋ ಎಂಬ ಭಯಮಿಶ್ರಿತ ಕುತೂಹಲ ನನ್ನನ್ನು ಸಣ್ಣಗೆ ಕಾಡುತ್ತಿದ್ದರೂ ಅದನ್ನು ತೋರ್ಪಡಿಸದೇ, ಎದೆಸೆಟೆಸಿ, ಬಾರದ ಮುಗುಳ್ನಗೆಯನ್ನು ಮುಖದಮೇಲೆ ತಂದುಕೊಂಡು ಡಾ|| ಸಿಂಗ್ ಅವರ ಮುಖವನ್ನು ದಿಟ್ಟಿಸುತ್ತಾ ನಿಂತೆ. ಆದರೆ ಡಾ|| ಸಿಂಗ್ ಅವರ ಗಂಭೀರ ಮುಖಮುದ್ರೆ ನನ್ನ ಮುಗುಳ್ನಗೆಯ ಬೇರನ್ನೇ ಚಿವುಟಿ ಹಾಕಿತು. ಅವರು ನನ್ನನ್ನು ಕರೆದೊಯ್ದು ತಮ್ಮ ಟೇಬಲ್ಲಿನ ಮುಂದಿದ್ದ ಕುರ್ಚಿಯಲ್ಲಿ ಕೂರಿಸಿ, ಆಚೆ ಬದಿಗಿದ್ದ ತಮ್ಮ ಕುರ್ಚಿಯಲ್ಲಿ ಆಸೀನರಾದರು. ಅವರ ಟೇಬಲ್ಲಿನ ಮೇಲಿದ್ದ ಎರಡೂ ಎಕ್ಸ್‌ರೇ ಫಿಲ್ಮ್‌ಗಳೂ ನನ್ನ ಕಣ್ಣು ಕುಕ್ಕುತ್ತಿದ್ದವು. ಎಂಥ ಪವಾಡವನ್ನು ಸಾಧಿಸಿದೆ ಈ ವಿಜ್ಞಾನ! ದೇಹದ ಒಳಗನ್ನೆಲ್ಲ ಬಯಲುಮಾಡಿ, ಬರಿಯ ಕಣ್ಣು ಕಾಣಲಾಗದ ಸತ್ಯವನ್ನು ಕಂಡುಕೊಂಡು ಅದನ್ನು ಈ ಬರಿಗಣ್ಣಿಗೆ ತೋರಿಸುವ ಈ ಎಕ್ಸ್‌ರೇಯನ್ನು ಸಂಶೋಧಿಸಿದ ರಾಂಟ್‌ಜೆನ್ನನ ಬಗ್ಗೆ ನನ್ನ ಮನಸ್ಸು ಚಿಂತಿಸತೊಡಗಿತು. ಈ ಬಗೆಯ ಕಿರಣಗಳು ವಿಶ್ವಸೃಷ್ಟಿಯಾದಾಗಿನಿಂದಲೂ ಇವೆ. ಆದರೆ ಇವುಗಳನ್ನು ಪತ್ತೆಮಾಡಲು ರಾಂಟ್‌ಜೆನ್ ಹುಟ್ಟುವವರೆಗೂ ಮನುಕುಲ ಕಾಯಬೇಕಾಯಿತು. ಈ ವೈಜ್ಞಾನಿಕ ಸಂಶೋಧನೆಗಳೆಲ್ಲವೂ ಹೀಗೆಯೇ. ಸಹಸ್ರಾರು ವರ್ಷಗಳಿಂದಲೂ ಇವೇ ವೈಜ್ಞಾನಿಕ ತತ್ವಗಳೇ ವಿಶ್ವದಲ್ಲಿ ಕಾರ್ಯಪ್ರವೃತ್ತವಾಗಿದ್ದವು. ಅವುಗಳನ್ನು ಕಂಡುಕೊಳ್ಳುವಲ್ಲಿ ಮಾತ್ರ ಮಾನವ ತನ್ನ ಜಾಣತನವನ್ನು...

'ಮಿಸ್ಟರ್... ಅವರೇ...' ನನ್ನ ಆಲೋಚನಾ ಲಹರಿ ತುಂಡಾಗಿ ಡಾ|| ಸಿಂಗ್ ಅವರ ಅಭಿಪ್ರಾಯ ಕೇಳಲು ಮೈಯೆಲ್ಲ ಕಿವಿಯಾಗಿ ಕುಳಿತೆ. ಅವರು ನನ್ನತ್ತ ನೋಡುತ್ತಿದ್ದ ರೀತಿಯೇ